ಆಯ್ಕೆ ಆಗಿದ್ದ. ಅದೂ ಬೆಂಗಳೂರಿನ ಐಐಎಂನಲ್ಲಿಯೇ. ಅವನಿಗಿಂತ ಹೆಚ್ಚು ಸಂತೋಷಪಟ್ಟಿದ್ದು ಅವನ ಪ್ರೊಫೆಸರ್. ಅವನ ಅಮ್ಮನನ್ನಂತೂ ಕೇಳುವುದೇ ಬೇಡ. ಅಳುವೇ ಅವಳ ಪ್ರತಿಕ್ರಿಯೆ. ಮಗ ಯಾವುದೋ ದೊಡ್ಡ ಕೆಲಸವೊಂದಕ್ಕೆ ಸೇರಿಕೊಂಡಿದ್ದಾನೆಂದು ಮೊದಲಿಗೆ ಖುಷಿ ಪಟ್ಟ ಆಕೆಗೆ 'ಅದಲ್ಲ ಇನ್ನೂ ಕಲಿಯುವುದೇ' ಎಂದಾಗ ತುಸು ನಿರಾಸೆಯಾದರೂ ಅದೆಲ್ಲ ತನಗೆ ತಿಳಿಯುವಂತಹುದಲ್ಲ ಎಂದು ತಲೆ ಕೊಡವಿದ್ದಳು. ಎರಡು ವರ್ಷ ಕಲಿತರೆ ಮುಂದೆ ಸಿಗುವ ಕೆಲಸ ಮತ್ತು ಅದರ ಸಂಬಳದ ಬಗ್ಗೆ ಮಗ ಹೇಳಿದರೆ ಆಕೆ ತೆರೆದ ಬಾಯಿಯನ್ನು ನಿಮಿಷಕಾಲ ಮುಚ್ಚಿರಲೇ ಇಲ್ಲ.

ಐಐಎಂನ ಅಂತಿಮ ವರ್ಷದ ಪರೀಕ್ಷೆಗೆ ತಯಾರಿ ನಡೆಯುತ್ತಿರುವಾಗಲೇ ಕ್ಯಾಂಪಸ್ಸಿಗೆ ಬಂದಿದ್ದ ಪ್ರಸಿದ್ಧ ಕಂಪನಿಯೊಂದು ಇವನನ್ನು ಆಯ್ಕೆ ಮಾಡಿತ್ತು. 'ಪರೀಕ್ಷೆ ಮುಗಿದಾಕ್ಷಣವೇ ಕೆಲಸಕ್ಕೆ ಸೇರಬೇಕು. ಮೂರು ತಿಂಗಳ ತರಬೇತಿ. ಅದರಲ್ಲಿ ಎರಡು ತಿಂಗಳು ಹೊರದೇಶದಲ್ಲಿ. ಅಷ್ಟರಲ್ಲಿ ಪರೀಕ್ಷೆಯ ಫಲಿತಾಂಶ ಬರುತ್ತದೆ. ಅದು ಅಂತಹ ಮುಖ್ಯವಾದದ್ದೇನೂ ಅಲ್ಲ. ನಿಮ್ಮ ಇಲ್ಲಿಯವರೆಗಿನ ದಾಖಲೆಗಳು ಮತ್ತು ಕಾಲೇಜಿನ ಆಂತರಿಕ ಪರೀಕ್ಷೆಗಳ ವರದಿಯೇ ಸಾಕು ನಮಗೆ' ಎಂದೆಲ್ಲ ಹೇಳಿದ್ದರು. ಇಂಟರ್ವ್ಯೂ ಮುಗಿಸಿ ಹೊರಬಂದವನಿಗೆ ಅನ್ನಿಸಿದ್ದು ಕೂಡಲೇ ಹೋಗಿ ತಾಯಿಯನ್ನು ಕಾಣಬೇಕು ಮತ್ತು ಅವಳ ಮಡಿಲಲ್ಲಿ ತಲೆಯಿಟ್ಟು ಮಲಗಿ ಮನಃಪೂರ್ತಿಯಾಗಿ ಅಳಬೇಕು ಎಂದು. ಆದರೆ ಮುಂದಿನ ತಿಂಗಳಲ್ಲಿಯೇ ಪರೀಕ್ಷೆಯಿತ್ತಲ್ಲ. ಆಸೆಯನ್ನು ತಡೆ ಹಿಡಿದುಕೊಂಡಿದ್ದ.

★★★

ಮಗನಿಗೆ ಕೆಲಸ ಸಿಕ್ಕಿ ಪಟ್ಟಣದಲ್ಲಿ ಮನೆ ಮಾಡಿದ್ದೇ ತಾಯಿಯನ್ನು ಕರೆದುಕೊಂಡು ಬಂದಿದ್ದ. ಊರಿನಲ್ಲಿ ಸುರಿದುಕೊಳ್ಳುವಂತಹುದೇನೂ ಇಲ್ಲದಿದ್ದ ಆ ತಾಯಿಯೂ ಕೂಡಲೇ ಬಂದಿದ್ದಳು. ಬಂದವಳೇ ಇಲ್ಲಿನ ಸೌಲಭ್ಯ ಅನುಕೂಲತೆಗಳನ್ನು ಕಂಡು ದಂಗು ಬಡಿದಿದ್ದಳು. ವರ್ಷಕ್ಕೆರಡು ಸೀರೆಯನ್ನು ಕಷ್ಟಪಟ್ಟುಕೊಂಡು ಮೂರು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದ ಆಕೆ ಹಣ ಕಾಣಲಿಕ್ಕೆ ಪ್ರಾರಂಭಿಸಿದ್ದೇ ಕಲಿಯುವುದಕ್ಕೆಂದು ಊರು ಬಿಟ್ಟ ಮಗ ಆಗಿಂದಾಗ್ಗೆ ಸ್ಕಾಲರ್‌ಶಿಪ್ಪು ಮತ್ತು ಬಹುಮಾನವಾಗಿ ಬರುತ್ತಿದ್ದ ಹಣವನ್ನು ತಂದು ಕೈ ಮೇಲೆ ಇಡುತ್ತಿದ್ದಾಗಲೇ. ಅಂಥವಳಿಗೆ ಈಗಂತೂ ಇದ್ದದ್ದೂ ಅಯೋಮಯ.

ದಿನ ಬೆಳಗಾದರೆ ಸೂಟು ಬೂಟು ಹಾಕಿಕೊಂಡು ಕಾರಿನಲ್ಲಿಯೇ ಮನೆಯಿಂದ ಹೊರಡುವ ಮಗ. ಕಾರನ್ನು ಬಿಡುವುದೂ ಅವನಲ್ಲ. ಕೈ ತುಂಬ ಸಂಬಳ ಪಡೆಯುವ ಡ್ರೈವರ್ ಇದ್ದಾನೆ. ಕೆಲವೊಮ್ಮೆ ಭಾನುವಾರಗಳಲ್ಲಿ ಪುರುಸೊತ್ತು ಮಾಡಿಕೊಂಡು ತಾಯಿಯನ್ನು ಕಾರಿನಲ್ಲಿ ಪಕ್ಕದಲ್ಲಿಯೇ ಕೂರಿಸಿಕೊಂಡು ತಾನೇ ಡ್ರೈವ್ ಮಾಡಿಕೊಂಡು ಹೋಗುತ್ತಾನೆ. ಆಗ ಆ ತಾಯಿಗೆ ಸ್ವರ್ಗಸುಖ.

ಮಗನಿಗೊಂದು ಮದುವೆ ಮಾಡಿ ಚಂದ ಕಾಣಬೇಕೆಂಬ ಆಸೆಯಿಂದ ಈಗ ತುಡಿಯುತ್ತಿದ್ದ ಆಕೆಯನ್ನು ಹೆದರಿಕೆ ತಡೆಯುತ್ತದೆ. ಹಳ್ಳಿಯ ತೀರ ಕೆಟ್ಟು ಹೋಗಿದ್ದ ಸಂಪ್ರದಾಯದ ನಡುವೆ ಬೆಳೆದವಳು ಅವಳು. ಮದುವೆಯೆಂದರೆ ಕುಲ ಗೋತ್ರಗಳನ್ನೆಲ್ಲ ಕೇಳುತ್ತಾರೆಂಬುದು ತಿಳಿದಿದೆ ಅವಳಿಗೆ. ಹೆಣ್ಣು ಹೆತ್ತವರಿಗೆ ಏನೆಂದು ಹೇಳುವುದು. ತನ್ನ ಚರಿತ್ರೆಯನ್ನು ಹೇಳಿದರೆ ಸಂಬಂಧದ ಮಾತುಕತೆ ಮುಂದುವರಿದೀತೇ... ಹಾಗೇನಾದರೂ ಆಗಿ ಮಾತುಕತೆ ಮುರಿದು ಬೀಳುವಂತಾದರೆ ಮಗನ ಪರಿಸ್ಥಿತಿ ಹೇಗಾದೀತು... ಇಂತಹ ಹುದ್ದೆಯಲ್ಲಿರುವ, ಸಮಾಜದಲ್ಲಿ ಇಂತಹ ಸ್ಥಾನ ಮಾನಗಳನ್ನು ಗಳಿಸಿರುವ ಅವನಿಗೆ ತನ್ನ ತಾಯಿ ಎಂತಹವಳೆಂದು ತಿಳಿಯುವಂತಾದರೆ... ಅದಕ್ಕಿಂತ ಅವಮಾನ ಬೇರೆ ಇದೆಯೇ ಅವನಿಗೆ. ಆ ತಾಯಿಗೆ ತೀವ್ರ ಆತಂಕ. ಅಂತಹ ಪರಿಸ್ಥಿತಿ ಬರದಂತೆ ನೋಡಿಕೊಳ್ಳುವುದೇ ಒಳ್ಳೆಯದು. ಅಂದರೆ ತಾನು ಅವನ ಮದುವೆಯ ಬಗ್ಗೆ ಮಾತನಾಡದಿರುವುದೊಂದೇ ದಾರಿ ಎನ್ನುವ ನಿರ್ಧಾರಕ್ಕೆ ಬಂದಳು. ಆದರೆ ಆ ಬಗ್ಗೆ ಕಹಿ ಮಾತ್ರ ಮನಸ್ಸಿನ ಮೂಲೆಯಲ್ಲಿ ಉಳಿದು ತನ್ನ ಮಗನ ಭವಿಷ್ಯಕ್ಕೆ ತನ್ನ